207

III

Total No. of Questions – 16

Total No. of Printed Pages – 4

Regd. No.

## Part - II
## KANNADA, Paper – II
## (Second Language)

Time : 3 Hours] [Max. Marks : 100

I. (A) ಈ ಕೆಳಗಿನ ಎರಡು ಪದ್ಯಗಳಲ್ಲಿ **ಒಂದರ** ಭಾವಾರ್ಥ ಬರೆಯಿರಿ. 1 × 5 = 5

ನಿಶೆಯಿಳಿದ ಉಷೆಯ, ಎಳನಗೆಯ ಬಗೆಗೆ, ಸೋತಿರಲು ಜಗವು ಸವಿಗೆ
ಕಣ್ಣೆದಿರು ಒಂದು, ಕಟ್ಟಿತ್ತು ಕನಸು ; ಕೂಗೊಂದು ಬಂತು ಕಿವಿಗೆ.
ಮಕ್ಕಳಿರ ಕೇಳಿ, ರಸ ಕುಡಿಯಲೇಳಿ, ಹುಸಿ ನಿದ್ದೆಗಿದ್ದೆ ಸಾಕು
ಈ ತುಂಬಿ ಬಾಳು, ತುಂಬಿರುವ ತನಕ, ತುಂತುಂಬಿ ಕುಡಿಯಬೇಕು.

**ಅಥವಾ**

ಹಂಚಿಕೊಂಡಿದ್ದಾರೆ ಅಪ್ಪ ಅಮ್ಮನನ್ನು
ಇಲ್ಲಿ ದೊಡ್ಡಮಗನ ತಾವಲ್ಲಿ ಮುದುಕಿ, ಸದ್ಯ, ಕನ್ನಡ ದೇಶ
ಮಗ ಸೊಸೆ ಹೊರಗೆ ಹೋದಾಗಲಾದರೂ ನಾಲ್ಕು ಮಾತಾಡಿ
ತೀರಿಸಿಕೊಳ್ಳುತ್ತಾಳೆ ಬಾಯಿ ತುರಿಕೆ, ಪಾಪ ಮುದುಕ ದೂರದ
ಅಸ್ಸಾಮಿನಲ್ಲಿ, ಅಲ್ಲಿಯ ಮಾತು ಅವನಿಗೆ ಸಸೇಮಿರ ಬರದು.

(B) ಈ ಕೆಳಗಿನ ಇಬ್ಬರು ಕವಿ/ಲೇಖಕರಲ್ಲಿ **ಒಬ್ಬರ** ಪರಿಚಯ ಬರೆಯಿರಿ. 1 × 5 = 5

(1) ಪುಲಿಗೆರೆ ಸೋಮನಾಥ (2) ಶ್ರೀಮತಿ ನೇಮಿಚಂದ್ರ

II. ಈ ಕೆಳಗಿನ ಎರಡರಲ್ಲಿ **ಒಂದಕ್ಕೆ** 20 ವಾಕ್ಯಗಳು ಮೀರದಂತೆ ಬರೆಯಿರಿ. 1 × 5 = 5

(1) ಈ ಕಾವ್ಯಭಾಗದಲ್ಲಿ ಮೂಡಿಬಂದಿರುವ ಭೀಮ – ದ್ರೌಪದಿಯರ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

(2) ಜೀಸಸ್ ನ ವ್ಯಕ್ತಿತ್ವ ಮತ್ತು ಆತನ ಮಹತ್ವವನ್ನು ಕವಿ ಯಾವ ರೀತಿ ನಿರೂಪಿಸಿದ್ದಾರೆ ? ವಿವರಿಸಿ.

III. ಈ ಕೆಳಗಿನ ಎರಡರಲ್ಲಿ **ಒಂದಕ್ಕೆ** 20 ವಾಕ್ಯಗಳು ಮೀರದಂತೆ ಉತ್ತರಿಸಿ. $1 \times 5 = 5$

(1) ಬೆಳ್ಳಿ ಲೋಟ ಕಂಡಾಗ ಧಣಿಯಲ್ಲಿ ಆಂತಕ, ಗಾಬರಿ, ಭಯ ಉಂಟಾಗಲು ಕಾರಣಗಳನ್ನು ವಿವರಿಸಿ.

(2) ತಾಯಿ – ತಂದೆ – ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿಗೆ ಆದರ್ಶ ಮಾದರಿ ಹೇಗೆ ? ವಿವರಿಸಿರಿ.

IV. ಈ ಕೆಳಗಿನ ಎರಡರಲ್ಲಿ **ಒಂದಕ್ಕೆ** 20 ವಾಕ್ಯಗಳು ಮೀರದಂತೆ ಉತ್ತರಿಸಿ. $1 \times 5 = 5$

(1) 'ಕೃಷ್ಣೇಗೌಡನ ಆನೆ' ಕಥೆಯಲ್ಲಿ ಬರುವ ಭ್ರಷ್ಟ ವ್ಯವಸ್ಥೆಯ ಚಿತ್ರಣವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

(2) ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣಗಳೇನು ?

V. ಈ ಕೆಳಗಿನ ನಾಲ್ಕರಲ್ಲಿ **ಎರಡಕ್ಕೆ** ಸಂದರ್ಭ ಸೂಚಿಸಿ ವಿವರಿಸಿ ಬರೆಯಿರಿ. $2 \times 3 = 6$

(1) ನಾರುವ ದುರ್ಗಂಧ ಬಿಡಬಲ್ಲುದೆ.

(2) ಮನ್ನಿಸಲಿ ನಿಮ್ಮನ್ನ ಆ ದೇವರೆ !

(3) ಎಣ್ಣೆ ತೀರಿರುವ ದೀಪಗಳಿಗೆ ಬತ್ತಿ ಹೊಸೆಯುವ ಕೆಲಸ.

(4) ದೀನ ದಲಿತತನಕ್ಕೆ ಧಿಕ್ಕಾರವಿರಲಿ !

VI. ಈ ಕೆಳಗಿನ ನಾಲ್ಕರಲ್ಲಿ **ಎರಡಕ್ಕೆ** ಸಂದರ್ಭ ಸೂಚಿಸಿ ವಿವರಿಸಿ. $2 \times 3 = 6$

(1) ನಾವು ಯಾವ ಪತ್ರಿಕೆಗಳನ್ನು ಓದುತ್ತಿದ್ದೇವೆ ?

(2) ಇದೇ ಲೋಟವಲ್ಲವೇ ..... ತನ್ನ ಬೆವರಿನ ಬೆಲೆ ಕಳೆದದ್ದು.

(3) ನೀನು ಯಾವ ಸ್ಕೂಲಿನಲ್ಲಿ ಓದುತ್ತಿದ್ದೀಯೆ ?

(4) ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು.

VII. ಈ ಕೆಳಗಿನ ನಾಲ್ಕರಲ್ಲಿ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. $2 \times 2 = 4$

(1) ಸೂರ್ಯ ಮತ್ತು ದೀಪಗಳಿಂದಾಗುವ ಉಪಯೋಗಗಳಾವುವು ?

(2) ಕುಜನರಾದವರು ಏನೆಂದು ನುಡಿಯುತ್ತಾರೆ ?

(3) ಬಡತನ ಹೇಗೆ ಬಯಲಾಯಿತು ?

(4) ತಂದೆ ಮಗುವಿಗೆ ಕಾಣಿಸಿಕೊಳ್ಳುವ ಬಗೆ ಹೇಗೆ ?

VIII. ಈ ಕೆಳಗಿನ ನಾಲ್ಕರಲ್ಲಿ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. **2 × 2 = 4**

(1) ಬಸಲಿಂಗನಿಗೆ ತನ್ನ ಕಷ್ಟದ ಮುಂದೆ ಯಾವುದು ಗೌಣವಾಗಿ ಕಾಣತೊಡಗಿದವು ?

(2) ಕಮಲ ಮೇಡಂ ವೈದ್ಯರ ಯಾವ ಸಲಹೆಯನ್ನು ರೂಢಿಸಿಕೊಂಡರು ?

(3) ಮುಂಜಾನೆ ಚಿನ್ನಮ್ಮ ಯಾವ ಕೆಲಸದಲ್ಲಿ ತೊಡಗಿದ್ದಳು ?

(4) ಕಲಾಂ ಅವರ ದೃಷ್ಟಿಯಲ್ಲಿ ಕನಸುಗಳು ಏನಾಗುತ್ತವೆ ?

IX. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. **1 × 5 = 5**

(1) ಸೀತೆ ರಾವಣನನ್ನು ಏನೆಂದು ಬೇಡಿಕೊಂಡಳು ?

(2) ಯಾರ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ ?

(3) ದ್ರೌಪದಿಯ ಮುಖವನ್ನು ಭೀಮ ಯಾವುದರಿಂದ ತೊಳೆದನು ?

(4) ಯಾರನ್ನು ಯೋಗಿ ಎನ್ನಬಹುದು ?

(5) ಮಗು ಹುಟ್ಟಿದ್ದು ಎಲ್ಲಿ ?

X. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿ. **1 × 5 = 5**

(1) ಸರ್ಕಾರಿ ಆಸ್ಪತ್ರೆಯ ಬಗ್ಗೆ ಬಸಲಿಂಗನಲ್ಲಿದ್ದ ಅಭಿಪ್ರಾಯವೇನು ?

(2) ಮಾರ್ಷ್‌ನ ಜೊತೆಗಾರನ ಹೆಸರೇನು ?

(3) ಧಣಿ ಎಂದಿಗೂ ಯಾರನ್ನು ನಂಬುವುದಿಲ್ಲ ?

(4) ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರು ?

(5) ಎತ್ತುಗಳು ಗಕ್ಕೆಂದು ಎಲ್ಲಿ ನಿಲ್ಲುತ್ತವೆ ?

XI. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿ. **1 × 5 = 5**

(1) ನಿರೂಪಕರ ಕೊಡಲಿಯ ಆಕಾರ ಹೇಗಿತ್ತು ?

(2) ಜಬ್ಬಾರ್ ವೆಟರ್ನರಿ ಆಸ್ಪತ್ರೆಗೆ ತೆರಳಲು ಕಾರಣವೇನು ?

(3) ಲೇಖಕರ ಇಕಾಲಜಿಸ್ಟ್ ಗೆಳೆಯ ಯಾರು ?

(4) ಬಲಭೀಮನಂತಿದ್ದ ಆನೆಯ ಮಾವುತ ನೋಡಲು ಹೇಗಿದ್ದ ?

(5) ಆನೆ ಕಣ್ಮರೆಯಾದ ವಿಚಾರವನ್ನು ನಾಗರಾಜನಿಗೆ ಹೇಳಿದವರಾರು ?

XII. ಈ ಕೆಳಗಿನ ಛಂದಸ್ಸುಗಳಲ್ಲಿ **ಒಂದರ** ಲಕ್ಷಣಗಳನ್ನು ಬರೆಯಿರಿ. **1 × 5 = 5**

(1) ತ್ರಿಪದಿ (2) ಭಾಮಿನಿ ಷಟ್ಪದಿ (3) ವೃತ್ತಗಳು

XIII. ಈ ಕೆಳಗಿನ ಪದ್ಯಗಳಲ್ಲಿ **ಒಂದಕ್ಕೆ** ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರು ಬರೆಯಿರಿ. 1 × 5 = 5

(1) ಅಳುಕಿ ನಡೆವವರಲ್ಲ ನಿನ್ನಯ
ಹಳಿವು ಹರಿಬವ ಹೇಳಿ ಚಿತ್ತವ
ತಿಳುಹಿ ಕೊಂಬುದು ನಾವು ಭೀತರು ಧರ್ಮಜನ ಹೊರೆಗೆ.

(2) ಪೊಸಗಾರ ಸಿಡಿಲ ಮಸಕಮ
ನಸಕಳಿದು ಕೃತಾಂತ ಜಿಹ್ವೆ ಪೊಡಕರಿಸುವವೋಲ್.

(3) ಪ್ರಮದವನಕ್ಕೆ ಬಂದ ನರಲಂಬುಗಳಿಲ್ಲದ ಕಾಮನೆಂಬಿನಂ.

XIV. ಈ ಕೆಳಗಿನ ಮೂರರಲ್ಲಿ **ಒಂದರ** ಅಲಂಕಾರವನ್ನು ಗುರುತಿಸಿ ಬರೆಯಿರಿ. 1 × 5 = 5

(1) ಎನ್ನ ಕಾಲೇ ಕಂಬ.

(2) ಆ ಸುಂದರಿಯ ಮುಖವು ಚಂದ್ರನ ಮುಖದಂತೆ ಮನೋಹರವಾಗಿದೆ.

(3) ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

XV. (A) ಈ ಕೆಳಗಿನ ಪದಗಳಲ್ಲಿ **ಐದಕ್ಕೆ** ಅರ್ಥ ಬರೆಯಿರಿ. 1 × 5 = 5

(1) ರವ (2) ಬೀಸರ (3) ಬಾಹಿರ (4) ಕಣ್ಣೆ
(5) ಅಸ್ತ (6) ಸಸೇಮಿರ (7) ಲೇಸರ್ (8) ಜಲಬಾಧೆ

(B) ಈ ಕೆಳಗಿನ ಪದಗಳಲ್ಲಿ **ಆರಕ್ಕೆ** ವಿರುದ್ಧಾರ್ಥ ಬರೆಯಿರಿ. 1 × 6 = 6

(1) ಮೂಡು (2) ಅನುಕೂಲ (3) ಆಯ (4) ಆಸ್ತಿಕ
(5) ಪ್ರಾಚೀನ (6) ಬೇಡು (7) ನಾಕ (8) ಬಂಧನ

(C) ಈ ಕೆಳಗಿನ **ಎಲ್ಲಾ** ಪದಗಳಿಗೆ ಒಂದೊಂದು ಸ್ವಂತ ವಾಕ್ಯ ರಚನೆ ಮಾಡಿ. 1 × 5 = 5

(1) ಸ್ವೀಕಾರ (2) ವಿರುದ್ಧ (3) ಮೈದಾನ
(4) ವಚನ (5) ಸಿರಿವಂತ

XVI. (A) ಈ ಕೆಳಗಿನವುಗಳಲ್ಲಿ **ಎರಡಕ್ಕೆ** ಟಿಪ್ಪಣಿ ಬರೆಯಿರಿ. 2 × 2 = 4

(1) ವಿಭಕ್ತಿ ಪ್ರತ್ಯಯಗಳು (2) ಲಿಂಗಗಳು
(3) ಅನುನಾಸಿಕ ಸಂಧಿ (4) ದ್ವಿರುಕ್ತಿಗಳು

(B) ಈ ಕೆಳಗಿನವುಗಳಲ್ಲಿ **ಒಂದಕ್ಕೆ** ಪ್ರಬಂಧ ಬರೆಯಿರಿ. 1 × 5 = 5

(1) ಇಬ್ಬರ ನ್ಯಾಯ ಮೂರನೆಯವನಿಗೆ ಆಯ
(2) ಯೋಗಾಭ್ಯಾಸದ ಪ್ರಯೋಜನಗಳು
(3) ಕೆರೆಗಳ ಮಹತ್ವ

---